# 61

# ಹೊಂದಾಣಿಕೆಯ ಮನೋಭಾವದ ಅಗತ್ಯತೆ

## ಓದುವ ಮನೆಪಾಠ #25

VI. ಮೂರನೇ ಪಸ್ಕದಿಂದ, ಆತನು ಬೆಥನಿಗೆ ಹಿಂದಿರುಗಿದ ಸಮಯದವರೆಗೆ (ಮುಂದುವರೆಯುವದು).

P. ಪ್ರಯಾಸದ ಸೇವೆ (ಮುಂದುವರೆಯುವದು).

8. ಇತರೆ ಬೋಧನೆಗಳು (ಲೂಕ 17:1-10).

Q. ಬೆಥಾನ್ಯಕ್ಕೆ.

1. ಲಾಜರನನ್ನು ಎಬ್ಬಿಸಿದ್ದು (ಯೋಹಾನ 11:1-46).
2. ಹಿರಿಸಭೆಯ ಆಜ್ಞೆ (ಯೋಹಾನ 11:47-53).

R. ಪಾಲೇಸ್ತೇನಿನ ಅಂತಿಮ ಯಾತ್ರೆ.

1. ಎಫ್ರಾಯಿಮಿನಲ್ಲಿ ವಾಸ (ಯೋಹಾನ 11:54).
2. ಸಮಾರ್ಯ ಹಾಗೂ ಗಲಿಲಾಯದಲ್ಲಿ (ಲೂಕ 17:11ಬಿ).

S. ಯೆರೂಸಲೇಮಿಗೆ ಅಂತಿಮ ಪ್ರಯಾಣ (ಲೂಕ 17:11ಎ).

1. ಕುಷ್ಟರೋಗಿಯ ಸ್ವಸ್ಥತೆ (ಲೂಕ 17:12-19).
2. ದೇವ ರಾಜ್ಯಕುರಿತ ಬೋಧನೆ (ಲೂಕ 17:20-37).
3. ಪ್ರಾರ್ಥನೆ ಕುರಿತ ಸಾಮ್ಯ.
   a. ಪೀಡಿಸಿದ ವಿಧವೆಯ ಸಾಮ್ಯ (ಲೂಕ 18:1-8).
   b. ಪರಿಸಾಯ ಹಾಗೂ ಸುಂಖದವನ ಸಾಮ್ಯ (ಲೂಕ 18:9-14).

## ಮುನ್ನುಡಿ

ನಾವೆಲ್ಲರೂ ಸಹ ನಕರಾತ್ಮಕವಾದ ಮನೋಭಾವದಿಂದ ನರಳುತ್ತಿದ್ದೇವೆ. ಅದು ನಮ್ಮ ಜೀವಿತದ ಪ್ರತಿ ಹಂತದಲ್ಲೂ ಪರಿಣಾಮ ಬೀರುತ್ತದೆ. ಆದ್ದರಿಂದ ಜ್ಞಾನಿಯಾದವನು, "ತನ್ನ ಒಳಗಿನ ಯೋಚನೆಯಂತೆಯೇ ಇದ್ದಾನೆ" (ಜ್ಞಾನೋಕ್ತಿ 23:7). ಇದರ ಕುರಿತು W. ಬೈಲೆಯವರು: "ನೀನು ಯೋಚಿಸಿದ ಹಾಗೆ ನೀನಿರದೆ, ನೀನು ಇರುವ ಹಾಗೆ ಯೋಚಿಸುವಿ" ಎಂದಿರುವರು. ಆದ್ದರಿಂದ ಪ್ರತಿಯೊಬ್ಬರಿಗೂ ಸಂದರ್ಭಕ್ಕನುಗುಣವಾದ ಮನೋಭಾವದ ಅಗತ್ಯವಿದೆ.[1]

ಈ ಅಧ್ಯಯದಲ್ಲಿ, ಯೇಸುವಿನ ಪಾಲೆಸ್ತೀನಿನ ಅಂತಿಮ ಸೇವೆಯ ಕುರಿತಾಗಿ ತಿಳಿಸಲಾಗಿದೆ. ಆತನು ಪೆರಿಯದಿಂದ, ಬೆಥನಿಗೂ, ಬೆಥನಿಯಿಂದ ಅರಣ್ಯಪ್ರದೇಶಕ್ಕೂ, ಅರಣ್ಯಪ್ರದೇಶದಿಂದ ಸಮಾರ್ಯ ಹಾಗೂ ಗಲಿಲಾಯಕ್ಕೂ ಮಾಡಿದ ಪ್ರಯಾಣದ ಕುರಿತು ನೋಡಲಿದ್ದೇವೆ. ನಂತರ ಆತನ ಯೆರೂಸಲೇಮಿನ ಶಿಲುಬೆಗೆ ಹೋದ ಅಂತಿಮ ಪ್ರಯಾಣವನ್ನು ಗಮನಿಸುತ್ತೇವೆ. ಆತನು ಲೋಕದಲ್ಲಿದ್ದ ಸಮಯವು ಹತ್ತಿರವಾದ್ದರಿಂದ, ಆತನು ಇನ್ನೂ ಆಳವಾಗಿ ಮಾತನಾಡಿಲಾರಂಭಿಸಿದನು. ಆತನು ಮಾಡಿದ ಬೋಧನೆಗಳು ಆತನ ಶಿಷ್ಯರಿಗೂ ಹಾಗೂ ಫರಿಸಾಯರಿಗೂ ಸಮಂಜಸವಾಗಿದ್ದವು. (ನೋಡಿ ಲೂಕ 17:20; 18:10; ಯೋಹಾನ 11:46). ಅವುಗಳೆಲ್ಲವು *ಉತ್ತಮ ಮನೋಭಾವಕ್ಕೆ* ಸಂಬಂಧಪಟ್ಟಿದ್ದವು. ನಮಗೆ ಅಗತ್ಯವಿರುವಂತೆ, ಆದಿ ಸಭೆಯವರು ಸಹ ಹೊಂದಾಣಿಕೆಯ ಮನೋಭಾವದ ಕೊರತೆವುಳ್ಳವರಾಗಿದ್ದರು.

## ಪಾಪದ ಕುರಿತಾದ ಮನೋಭಾವವನ್ನು ಸರಿಪಡಿಸಿಕೊಳ್ಳಿರಿ (ಲೂಕ 17:1-10)

ಹಿಂದಿನ ಅಧ್ಯಯನಗಳಲ್ಲಿ ಗಮನಿಸಿದ ವಿವಿಧ ಸಾಮ್ಯಗಳು ಫರಿಸಾಯರನ್ನು ಉದ್ದೇಶಿಸಿ, ಹೇಳಿದವುಗಳಾಗಿವೆ (ಲೂಕ 14:1, 12, 16; 15:1-3; 16:13, 14). ಈಗ ಯೇಸು ತನ್ನ ಶಿಷ್ಯರಿಗೆ ಸಾಮಾನ್ಯ ಸಲಹೆಗಳ ಸರಣಿಯನ್ನು ಬೋಧಿಸುತ್ತಿರುವನು.

### ಪಾಪದ ಕುರಿತ ಮನೋಭಾವ: ಒಂದು ಚಿಂತನೆ (ವಚನಗಳು 1-3ಬಿ)

ತೊಡಕುಗಳು ಯಾರಿಂದ ಬರುತ್ತವೋ, ಅಯ್ಯೋ ಅವರ ಗತಿಯನ್ನು ಏನು ಹೇಳಲಿ (ವಚನಗಳು 1, 2).[2] ಜ್ಞಾನದಲ್ಲಿ ಮುಗ್ದರಾದ ಹಾಗೂ ಅವಕಾಶವಿರುವಂಥ[3] ತನ್ನ ಶಿಷ್ಯರನ್ನು "ಚಿಕ್ಕವರು" ಎಂದು ಸಂಬೋಧಿಸಿರುವನು. ಇಲ್ಲಿ ತೊಡಕು ಉಂಟು ಮಾಡಿರುವವರು ಫರಿಸಾಯರೇ ಆಗಿರುವರು (16:14), ನಾವು ಯಾರಿಗೂ ಸಹ ತೊಡಕು ಉಂಟುಮಾಡಬಾರದೆಂದು ಹೊಸ ಒಡಂಬಡಿಕೆ ತಿಳಿಸುತ್ತದೆ (1 ಕೊರಿಂಥ 8:13). ತನ್ನ ಶಿಷ್ಯರು "ಎಚ್ಚರವಾಗಿರಬೇಕೆಂದು ಕ್ರಿಸ್ತನು ಎಚ್ಚರಿಸಿದನು" (ಲೂಕ 17:3ಎ). ಈ ಪಾಪವನ್ನು ಮಾಡಬೇಡಿರಿ ಎಂಬುದು ಇನ್ನೊಂದು ಅರ್ಥ.

"ನಿನ್ನ ಸಹೋದರನು ತಪ್ಪು ಮಾಡಿದರೆ ಅವನನ್ನು ಗದರಿಸು" (ವಚನ 3ಬಿ). ಅದು ಪ್ರಖ್ಯಾತವಾದದ್ದಾಗಿರದೆ, ಅಗತ್ಯವಿರುವ ಉಪದೇಶವಾಗಿದೆ. ಒಬ್ಬ ಸಹೋದರನಲ್ಲಿರುವ ಪಾಪವು ಅವನ ಆತ್ಮವನ್ನು ಕೊಲ್ಲುತ್ತದೆ, ಆದ್ದರಿಂದ ಅದನ್ನು ಅಲಕ್ಷಿಸಬಾರದು, ನಮ್ಮಲ್ಲಿರುವ ಪ್ರೀತಿಯು ಅವನ ಪಾಪವನ್ನು ಖಂಡಿಸುತ್ತದೆ, ಅವನನ್ನು ಸಂರಕ್ಷಿಸುತ್ತದೆ (ಯಾಕೋಬ 5:19, 20). "ಅವನನ್ನು ಶಾಂತಭಾವದಿಂದ ಹಾಗೂ ಪ್ರೀತಿಯಿಂದ ತಿದ್ದಿ ಸರಿಪಡಿಸಬೇಕು" (ಗಲಾತ್ಯ 6:1; ಎಫೆಸ 4:15).[4]

### ಪಾಪಿಗಳ ಕುರಿತಾದ ಮನೋಭಾವ: ಅನುಕಂಪ (ವಚನಗಳು 3ಸಿ-6)

ನಾವು ಸುಮ್ಮನೆ ಖಂಡಿಸುವದು ಮಾತ್ರವಲ್ಲದೆ, ನಾವು ಕ್ಷಮಿಸಲು ಸಹ ಸಿದ್ಧರಿರಬೇಕು (ವಚನ 3ಸಿ). "ನೀತಿಯು ಪಾಪವನ್ನು ಖಂಡಿಸುವದಾದರೆ, ಪ್ರೀತಿಯು ಕ್ಷಮಿಸುತ್ತದೆ"[5] ಎಂದು J. W. ಮೆಕ್‌ಗಾರ್ವೆಯವರ ಹೇಳಿಕೆ. ಒಬ್ಬನು ಒಂದು ದಿನದಲ್ಲಿ ಏಳುಸಾರಿ ಪಾಪಮಾಡಿದರು, ಅದನ್ನು ಮನ್ನಿಸುವ ಮನೋಭಾವವನ್ನು ಹೊಂದಬೇಕೆಂದು ಯೇಸು ತನ್ನ ಶಿಷ್ಯರಿಗೆ ತಿಳಿಸಿದನು (ವಚನ 4).[6]

ಇದು ಕಷ್ಟಕರವಾದ ಮಾತಲ್ಲವೇ.[7] ನಮ್ಮ ನಂಬಿಕೆಯನ್ನು ಹೆಚ್ಚಿಸು ಎಂದು ಶಿಷ್ಯರು ಬೇಡಿಕೊಂಡರು (ರೋಮಾಪುರ 10:17; ನೋಡಿ ಯೋಹಾನ 17:20; 20:31). ಆದರೆ ಯೇಸು ನಂಬಿಕೆಯ ಪ್ರಾಮುಖ್ಯತೆಯನ್ನು ಅರಿಯಬೇಕೆಂದು ಅವರನ್ನು ಎಚ್ಚರಿಸಲು ಒಂದು ದೃಷ್ಟಾಂತವನ್ನು ತಿಳಿಸಿದನು (ಲೂಕ 17:6).[8]

### ಪಾಪವನ್ನು ತೀರ್ಪು ಮಾಡುವವರ ಕುರಿತಾದ ಮನೋಭಾವನೆ ಅನುತಾಪ (ವಚನಗಳು 7-10)

ಒಂದು ಎಚ್ಚರಿಕೆಯನ್ನು ನೀಡುವ ಮೂಲಕ ಸಾಮಾನ್ಯ ಸಲಹೆಯು ಅಂತ್ಯಗೊಂಡಿತು. ಪಾಪ ಮತ್ತು ಪಾಪಿಗಳ ಕುರಿತು ಒಬ್ಬನು ಯಾವಾಗಲೂ ಸರಿಯಾದ ಮನೋಭಾವ ಹೇಗೆ ಹೊಂದಿರಬಹುದು? ದೇವರು ಅವನಿಗೆ ಅದನ್ನು ನೇಮಿಸಿರುವನೇ? (ಪಾಪಿಗಳಿಗೆ ತೀರ್ಪು ನೀಡುವವನು) ಇಲ್ಲ. ತಮ್ಮ "ಒಳ್ಳೆಯ ತನದಿಂದ" ಪರಲೋಕಕ್ಕೆ ಹೋಗಬಹುದೆಂದು ಫರಿಸಾಯರು ತಿಳಿದಿದ್ದರು (ಲೂಕ 18:9-12), ಆದರೆ ಅವರು ಅಪಾರ್ಥಮಾಡಿಕೊಂಡಿದ್ದರು. ಒಬ್ಬ ದಾಸನು ತನ್ನ ಕರ್ತವ್ಯವನ್ನು ಮಾಡಿದ ನಿದರ್ಶನವನ್ನು ಕ್ರಿಸ್ತನು ನೀಡಿದನು (ಲೂಕ 17:7-9). ಯೇಸು ಇದನ್ನು ಕುರಿತು, "ನೀವು ನಿಮಗೆ ಅಪ್ಪಣೆಯಾಗಿರುವದನ್ನೆಲ್ಲಾ ಮಾಡಿದ ಮೇಲೆ - ನಾವು ಆಳುಗಳು, ಪ್ರಯೋಜನವಿಲ್ಲದವರು, ಮಾಡಬೇಕಾದದ್ದನ್ನೇ ಮಾಡಿದ್ದೇವೆ

ಅನ್ನಿರಿ ಎಂದು ಹೇಳಿದನು" (ವಚನ 10).

ದೇವರು ನೇಮಿಸಿರುವದನ್ನೆಲ್ಲಾ, ಯಾರು ಸಹ ಈಡೇರಿಸಲಾರರು (ರೋಮಾಪುರ 3:10; ಕೀರ್ತನೆ 143:2). ನಾವು ಆಳುಗಳು, ಅಪ್ರಯೋಜಕರೇ ಲೂಕ 17:10 ದೇವರ ಕೃಪೆ ಹಾಗೂ ಕನಿಕರವನ್ನು ಪಡೆಯಲು ಪ್ರಾರ್ಥಿಸಿರಿ.

## ಯೇಸುವನ್ನು ಅರಿಯುವ ಮನೋಭಾವದ ಹೊಂದಾಣಿಕೆ ಮಾಡಿಕೊಳ್ಳಿರಿ (ಯೋಹಾನ 11:1-54)

ಪೆರಿಯದಲ್ಲಿ ಯೇಸು ಸೇವೆ ಮಾಡುತ್ತಿರುವಲ್ಲಿ, ಯೆರೂಸಲೇಮಿನ ಬಳಿ ಇದ್ದ ಬೆಥನಿಯಿಂದ ಒಂದು ತುರ್ತಾದ ಕರೆಯನ್ನು ಹೊಂದಿದನು (ವಚನಗಳು 1, 18). ಮಾರ್ಥ, ಮರಿಯಳು ತಮ್ಮ ತಮ್ಮನಾದ ಲಾಜರನ್ನು ಅಸ್ವಸ್ಥನಾದನು ಎಂದು ಯೇಸುವಿಗೆ ಸಮಾಚಾರ ತಿಳಿಸಿದರು (ವಚನ 3). ಈ ಸುದ್ದಿಯನ್ನು ಕೇಳಿದ ನಂತರ ಯೇಸು ಎರಡು ದಿನಗಳ ಕಾಲ ತಡೆದನು (ವಚನ 6). ಅದರಲ್ಲಿ ಯಾವ ಭಿನ್ನಾಭಿಪ್ರಾಯವು ಇರಲಿಲ್ಲ. ಏಕೆಂದರೆ ಯೇಸು ಅವನನ್ನು ಹಾಗೂ ಅವನ ಸಹೋದರಿಯರನ್ನು ಪ್ರೀತಿಸಿದ್ದನು (ವಚನ 5). ಅವನು ಬರುವದರೊಳಗಾಗಿ ಲಾಜರನು ಸಾಯಬೇಕು ಎಂಬ ಉದ್ದೇಶವೂ ಅದರಲ್ಲಿ ಇರಲಿಲ್ಲ. ಆದರೆ ಯೇಸು ಬೇಥಾನ್ಯಕ್ಕೆ ತಲುಪುವದರೊಳಗಾಗಿ ಲಾಜರನು ಮರಣ ಹೊಂದಿ ನಾಲ್ಕು ದಿವಸಗಳಾಗಿದ್ದವು (ವಚನಗಳು 17, 39). ಒಂದು ವೇಳೆ ಸುದ್ದಿಯನ್ನು ಕೇಳಿದ ತಕ್ಷಣವೇ ಯೇಸು ಹೊರಟಿದ್ದರೂ, ತನ್ನ ಸ್ನೇಹಿತನು ಮರಣ ಹೊಂದುವದರೊಳಗಾಗಿ ಅಲ್ಲಿ ತಲುಪುವ ಸಾಧ್ಯತೆಗಳಿರಲಿಲ್ಲ.[10] ಲಾಜರನು ನಿಜವಾಗಿ ಸತ್ತಿದ್ದನು ಎಂದು ದೃಢಪಡಿಸುವ ಸಲುವಾಗಿ ಎರಡು ದಿವಸ ತಡಮಾಡಿರಬಹುದು (ವಚನ 39). ಇದರಿಂದ ಪುನರುತ್ಥಾನದ ವಿಚಾರವು ದೃಢಪಡಿಸಲು ಸಾಧ್ಯವಾಯಿತು.

ತಡವಾದದಕ್ಕೆ ಕಾರಣಗಳು ಏನೇ ಇರಲಿ, ಯೇಸು ದೇವರ ಮಗನು ಎಂದು ದೃಢಪಡಿಸುವ ದೇವರ ಉದ್ದೇಶ ಹಾಗೂ ಯೋಜನೆಯು ಸ್ಥಾಪನೆಯಾಯಿತು (ವಚನಗಳು 4, 15, 42). ಇದರಲ್ಲಿ ಯಾವುದೇ ಸಂದೇಹವಿಲ್ಲ. "ಆದುದರಿಂದ" ಎಂಬ ಪದವನ್ನು ಇಲ್ಲಿ (ವಚನಗಳು 16, 20, 32, 33, 45) ಗಮನಿಸಿರಿ. ಅದರಲ್ಲಿ ಒಂದು ಹಿನ್ನೆಲೆ ಮಾತ್ರ ಅಡಗಿರದೆ, ಅಲ್ಲಿ ನಡೆದ ಘಟನೆಗಳಿಗೆ ಒಂದು ಕಾರಣವಿತ್ತು ಎಂದು ಸಹ ಗಮನಿಸುತ್ತೇವೆ. ಒಂದು ದೈವೀಕ ಉದ್ದೇಶವು ನೆರವೇರಿರುತ್ತದೆ.

ಲಾಜರನ ಪುನರುತ್ಥಾನವನ್ನು ಯೇಸು ಮಾಡಿದ ಸೇವೆಯ ಒಂದು "ಮಹತ್ತರವಾದ" ನಿಖರ ಘಟನೆ ಎಂದು ಗಮನಿಸಲಾಗಿದೆ.[11] ನಾಯಿರದ ವಿಧವೆ ಮಗನ (ಲೂಕ 7:11-17) ಮತ್ತು ಯಾಯಿರನ ಮಗಳ ಪುನರುತ್ಥಾನದ ಕುರಿತು (ಮಾರ್ಕ 5:22-24; 35-43) ತಿಳಿಸಿರುವದಲ್ಲದೇ, ಈ ಅಂಶಗಳನ್ನು ತಿಳಿಸಲು ಬರಹಗಾರರು ಬಳಸಿರುವ ಸಂಕ್ಷಿಪ್ತ ಪದಗಳನ್ನು ಗಮನಿಸಬೇಕಾಗಿದೆ. ಇಲ್ಲಿ ಲಾಜರನ ಪುನರುತ್ಥಾನದ ಕುರಿತು ಒಂದು ಪೂರ್ಣ ಅಧ್ಯಾಯವನ್ನು ನೀಡಲಾಗಿದೆ. ಇದು ವಿಭಿನ್ನವಾದ ಪುನರುತ್ಥಾನವಾಗಿದೆ: ಅದು ಗಲಿಲಾಯದಿಂದ ದೂರ ಪ್ರದೇಶದಲ್ಲಾಗದೇ, ಯೇಸುವಿನ ವೈರಿಗಳು ಇದ್ದ ಪ್ರದೇಶದಲ್ಲಿ ಜರಗಿದ ಸಂಗತಿಯಾಗಿದೆ. ಅದು ಯಾರೂ ಸಹ ತಿರಸ್ಕರಿಸದ (ಯೋಹಾನ 11:47) ಸಕಲರು ಅರಿತ ಅದ್ಭುತವಾಗಿದೆ (ಯೋಹಾನ 12:9). ಯೇಸುವಿನ ವೈರಿಗಳಲ್ಲೂ ನಂಬಿಕೆಯನ್ನು ವೃದ್ಧಿಮಾಡುವ ಅದ್ಭುತವಾಗಿದೆ (ಯೋಹಾನ 11:45, 12:11). ಕ್ರಿಸ್ತನ ಗುರಿ ಸಾಧಿಸುವ ಸಾಧನವು ಇದಾಗಿದೆ (ಯೋಹಾನ 11:47-53).

### ಸಹೋದರಿಯರ ಮನೋಭಾವ: ಕ್ರಿಸ್ತನನ್ನು ಅವಲಂಭಿಸಬಹುದಾಗಿದೆ (ವಚನಗಳು 17-46)

ಆ ಸುದ್ದಿಯನ್ನು ಕೇಳಿದ ಎರಡು ದಿವಸಗಳ ನಂತರ, ಯೇಸು ಯೂದಾಯಕ್ಕೆ ತೆರಳುವ

ಸಂಗತಿಯನ್ನು ಪ್ರಕಟಿಸಿದನು (11:7).[12] ಅಲ್ಲಿ ಸಂಭವಿಸಬಹುದಾದ ಅಪಾಯದ ಕುರಿತು ಶಿಷ್ಯರು ಗಮನ ಸೆಳೆದಿದ್ದರು (11:8; ನೋಡಿ 10:31, 39). ಅವರ ಯಜಮಾನನು ನಿರ್ಧಾರ ಮಾಡಿದ್ದರಿಂದ, ಶಿಷ್ಯರು ತಮ್ಮ ಮರಣವನ್ನು ಲೆಕ್ಕಿಸದೆ ಆತನೊಂದಿಗೆ ಅಲ್ಲಿಗೆ ಹೋಗಲು ನಿರ್ಧರಿಸಿದರು (11:16).[13]

ಕ್ರಿಸ್ತನು ಬೆಥಾನ್ಯದ ಬಳಿ ಬಂದಾಗ (ವಚನ 30) ಮಾರ್ಥಳು ಆತನನ್ನು ಸಂಧಿಸಿದಳು (ವಚನ 20). ಆಕೆಯು ಆತನನ್ನು ಕಂಡಾಗ, ಆತನು ಮಾಡಬಹುದಾದ ಅದ್ಭುತದಲ್ಲಿ ತನಗಿದ್ದ ನಂಬಿಕೆಯ ಶ್ರದ್ಧೆಯ ಮಾತುಗಳನ್ನಾಡಿದಳು (ವಚನಗಳು 21, 22). ಆದರೆ ಆ ಅದ್ಭುತದಲ್ಲಿ ಯೇಸು ಹೊಂದಿದ್ದ ಉದ್ದೇಶವನ್ನು ಆಕೆ ಅರಿಯಲಿಲ್ಲ (ವಚನಗಳು 24, 39). ಅವರಿಬ್ಬರ ನಡುವೆ ಸಂಭವಿಸಿದ ಸಂವಾದವು ನೆನಪಿಡುವ ಎರಡು ಹೇಳಿಕೆಗಳನ್ನು ಹೊಂದಿವೆ.

- *ಒಂದು ಖಂಡಿತವಾದ ಮಾತು:* ಯೇಸು ಆಕೆಗೆ ನಾನೇ ಪುನರುತ್ಥಾನವೂ, ಜೀವವೂ ಆಗಿದ್ದೇನೆ ನನ್ನನ್ನು ನಂಬುವವನು ಸತ್ತರೂ ಬದುಕುವನು,[14] ಬದುಕುತ್ತಾ ನಂಬುವವನು ಎಂದಿಗೂ ಸಾಯುವದಿಲ್ಲ ...[15] (ವಚನಗಳು 25, 26) ಅಂದನು. ಯೇಸು ಹೇಳಿದ, "ನಾನೇ" ಎಂಬ ಪ್ರಮುಖ ವ್ಯಾಖ್ಯಾನವು ಇದಾಗಿದೆ.[16] ಯೇಸು ತನ್ನ ಬಗ್ಗೆ ತಾನು ಹೇಳಿದಂತೆ ಇಲ್ಲದೆ ಹೋದರೆ, ಅದು ತಪ್ಪಾಗುತ್ತದೆ.
- *ಒಂದು ದೃಢವಾದ ನಂಬಿಕೆ:* "ಆಕೆ ಯೇಸುವಿಗೆ ನೀನು ಲೋಕಕ್ಕೆ ಬರಬೇಕಾದ ಮನುಷ್ಯ ಕುಮಾರನಾದ ಕ್ರಿಸ್ತನು ನೀನೇ ಎಂದು ನಂಬುತ್ತೇನೆ" ಅಂದಳು (ವಚನ 27). ಮಾರ್ಥಳು ಯೇಸುವಿನ ಕುರಿತಾದ ಮೂರು ದೃಢವಾದ ಅಂಶಗಳನ್ನು ಬಹಿರಂಗ ಪಡಿಸಿದಳು. ಕೈಸರೆಯ ಫಿಲಿಪ್ಪಿಯಲ್ಲಿ ಪೇತ್ರನು ಮಾಡಿದ ಸತ್ಯವಾದ ಹೇಳಿಕೆಗೆ ಇದು ಸಮನಾಗಿದೆ (ಮತ್ತಾಯ 16:16).

ಮರಿಯಳು, ಮಾರ್ಥಳೊಂದಿಗೆ ಸೇರಿದ ನಂತರ ಅವರೆಲ್ಲರು ಅಳುವವರ ಸಂಗಡ ಕೂಡಿ, ಲಾಜರನನ್ನು ಹೂಣಿಟ್ಟಿದ ಸಮಾದಿಯ ಬಳಿಗೆ ಬಂದರು. ಅಲ್ಲಿ ಕಣ್ಣೀರು ಸುರಿಸುತ್ತಿದ್ದವರನ್ನು ಯೇಸು ಕಂಡು, "ಆತನು ತತ್ತರಿಸಿ, ತನ್ನ ಆತ್ಮದಲ್ಲಿ ನೊಂದು ಕೊಂಡನು"[17] (ಯೋಹಾನ 11:33). ನಂತರ ಆತನ ಬಾಯಿಂದ ಕೆಲವು ಪ್ರಮುಖ ಮಾತುಗಳು ಬಂದವು, ಅವು ನಮಗೆ ಚಿರಪರಿಚಿತವಾಗಿದೆ.[18] "ಯೇಸು ಕಣ್ಣೀರಿಟ್ಟನು" (ವಚನ 35). ಆತನು ತನ್ನ ಸ್ನೇಹಿತನನ್ನು ಕಳಕೊಂಡದ್ದಕ್ಕಾಗಿ ಅತ್ತನು ಎಂದು ಅಲಿದ್ದವರಲ್ಲಿ ಕೆಲವರು ಭಾವಿಸಿದರು (ವಚನ 36). ಆ ಕ್ಷಣದಲ್ಲಿ ಅದು ಆ ರೀತಿ ಇರಲಾರನು. ಯಾಕೆಂದರೆ ಕೆಲವೇ ಕ್ಷಣಗಳಲ್ಲಿ ಆತನು ಲಾಜರನನ್ನು ನೋಡುವವನ್ದಿನು. ಆದರೆ ಮಾರ್ಥ ಹಾಗೂ ಮರಿಯಳ ದುಃಖವನ್ನು ಕಂಡು ಆತನು ಕಣ್ಣೀರಿಟ್ಟನು.[19] ಬಲಹೀನತೆಯಲ್ಲಿ, ಆತನು ಅನುತಾಪ ಪಡುತ್ತಾನೆ ಎಂದು ಇಂದಿಗೂ ನಾವು ಅರಿಯಬಹುದಾಗಿದೆ (ಇಬ್ರಿಯ 4:15).

ಕ್ರಿಸ್ತನು ಅವರಿಗೆ ಸಮಾಧಿಗೆ ಮುಚ್ಚಿದ್ದ ಕಲ್ಲನ್ನು ತೆಗೆಯಿರಿ ಅಂದನು (ಯೋಹಾನ 11:38, 39).[20] ಆತನು ದೇವರಿಗೆ ಪ್ರಾರ್ಥಿಸಿದ ನಂತರ (ವಚನಗಳು 41, 42). ಗಟ್ಟಿಯಾದ ಸ್ವರದಿಂದ, "ಲಾಜರನೇ ಹೊರಗೆ ಬಾ ಅಂದನು" (ವಚನ 43). ಮೆಕ್ ಗಾರ್ವೆಯವರು ಈ ಕುರಿತು, "ಸತ್ತವರಲ್ಲಿ ಇತರರು ಎದ್ದು ಬಾರದಂತೆ, ಯೇಸು ಲಾಜರನ ಹೆಸರನ್ನು ಮಾತ್ರ ಕರೆದನು" ಎಂದು ಬರೆದಿರುವರು.[21] ಅಲ್ಲಿ ನೆರದಿದ್ದವರ ಹಾಗೂ ಮಾರ್ಥ, ಮರಿಯಳ ಸಂತೋಷವನ್ನ ಊಹೆಮಾಡುವಿರಾ, ಯಾಕೆಂದರೆ ಬಟ್ಟೆಯಿಂದ ಸುತ್ತಲ್ಪಟ್ಟಿದ್ದ ಲಾಜರನು ಅವರ ಮುಂದೆ ಪ್ರತ್ಯಕ್ಷನಾಗಿದ್ದನು, ಅವನ ಮುಖವು ಕೈಪಾವಡದಿಂದ ಕಟ್ಟಲ್ಪಟ್ಟಿತು" (ವಚನ 44)?

"ಯೆಹೂದ್ಯರು" ಸಹ ಈ ಪುನರುತ್ಥಾನಕ್ಕೆ ಸಾಕ್ಷಿಯಾಗಿದ್ದರು ಎಂದು ಯೋಹಾನನು ತಿಳಿಸಿರುವನು (ವಚನಗಳು 19, 31, 33). ತನ್ನ ಲೆಕ್ಕಾಚಾರದಲ್ಲಿ, ಇವರು "ಯೆಹೂದ್ಯ

ನಾಯಕರು" ಎಂಬುದು ಅವನ ಹೇಳಿಕೆಯಾಗಿದೆ.[22] ಇಂಥಹ ಯೆಹೂದ್ಯ ನಾಯಕರು ಮಾರ್ಥ, ಮರಿಯಳನ್ನು ಸಂತೈಸಲು ಬಂದವರು ಎಂಬ ವಿಚಾರದಿಂದ, ಅವರ ಕುಟುಂಬವು, ಅವರ ಸಮಾಜದಲ್ಲಿ ಗೌರವಯುತವಾಗಿತ್ತು ಎಂದು ತಿಳಿಯುತ್ತೇವೆ. ಇದರಿಂದ ಲಾಜರನ ಪುನರುತ್ಥಾನವು ಮಹಾ ಪರಿಣಾಮ ಬೀರಿತ್ತು ಎಂದು ಅರಿಯಬಹುದಾಗಿದೆ (ಯೋಹಾನ 12:9-11).

"ಯೆಹೂದ್ಯರು" ಯಾರೇ ಆಗಿರಲಿ, ಯಥಾರ್ಥವಾದವರು ಈ ಪುನರುತ್ಥಾನದ ಮೂಲಕ ನಂಬಿದರು (11:45). ನಂತರ ಅವರಲ್ಲಿ ಕೆಲವರು ಯೆರೂಸಲೇಮಿಗೆ ತೆರಳಿ, "ನಡೆದ ಸಂಗತಿಗಳನ್ನು" ಫರಿಸಾಯರಿಗೆ ತಿಳಿಸಿದರು (ವಚನ 46).

**ಹಿರೀ ಸಭೆಯವರ ಮನೋಭಾವ: ಅದನ್ನು ಅಲ್ಲಗಳೆಯುವ ಸ್ಪರ್ಧೆ (ವಚನಗಳು 47-54)**

ಹಿರೀಸಭೆಯವರು ಒಂದು ವಿಶೇಷ ಸಭೆಯನ್ನು ಕರೆದರು (ವಚನ 47).[23] ಈ ಕುರಿತು ಈ ಹಿಂದೆ ಯೇಸು, "ಸತ್ತು ಹೋದವನು ಬದುಕಿ ಬಂದರೂ ಇವರು ನಂಬುವದಿಲ್ಲ" ಎಂಬ ಹೇಳಿಕೆಯನ್ನು ಯೇಸು ನೀಡಿದ್ದನು (ಲೂಕ 16:31). ಲಾಜರನು ಎದ್ದು ಬಂದ ವಿಚಾರವು, ಆ ಕಠಿಣ ಹೃದಯಗಳಲ್ಲಿ ನಂಬಿಕೆಯನ್ನು ಹುಟ್ಟಿಸದೆ, ಅವರಲ್ಲಿ ಗೊಂದಲವನ್ನು ಉಂಟುಮಾಡಿತ್ತು.

ಯೇಸುವನ್ನಾಗಲೀ ಅಥವಾ ಆತನು ಮಾಡಿದ ಅದ್ಭುತವನ್ನಾಗಲೀ ಅರಿಯುವ ಉದ್ದೇಶ ದಿಂದ ಈ ಸಭೆಯನ್ನು ಅವರು ಕರೆಯಲಿಲ್ಲ. ತಮ್ಮ ಕೆಲಸ ಹಾಗೂ ಅವಕಾಶಕ್ಕಾಗಿ ಕರೆದಿದ್ದರು (ನೋಡಿ ವಚನ 48): ಒಂದು ವೇಳೆ ಈಗ ಯೇಸುವನ್ನು ತಡೆಯದೆ ಹೋದರೆ ಪಟ್ಟಣವು ಪೂರ್ಣವಾಗಿ ಗೊಂದಲಮಯವಾಗುತ್ತಿತ್ತು. ಆಗ ರೋಮಾಯರು ನಿಷೇದಾಜ್ಞೆಯನ್ನು ಹೊರಡಿಸಿ, ಅದರಿಂದ ಪರಿಸಾಯರ ಕಾರ್ಯಗಳಿಗೆ ಅಡಚಣೆಯಾಗುತ್ತಿತ್ತು.

ಅವರ ಈ ಸಮಸ್ಯೆಗೆ ಪರಿಹಾರ, ಯೇಸುವಿನ ಮರಣವೇ ಆಗಿತ್ತು. ಯಾಜಕನಾದ ಕಾಯಫನು[24] ಹಿರೀಸಭೆಯವರಿಗೆ "... ಜನವೆಲ್ಲಾ ನಾಶವಾಗುವದಕ್ಕಿಂತ ಒಬ್ಬ ಮನುಷ್ಯನು ಜನಕ್ಕೋಸ್ಕರ ಸಾಯುವುದು ನಿಮಗೆ ಹಿತವಲ್ಲವೇ ಅಂದನು" (ವಚನ 50).

ಅಂದರೆ ರೋಮಾಯರ ಅಧಿಕಾರವಧಿಯಲ್ಲಿ ಇದ್ದ ಯೆಹೂದ್ಯರು ಸುಗಮವಾಗಿ ಇರಬೇ ಕೆಂದರೆ, ಯೇಸುವನ್ನು ಕೊಲ್ಲುವದು ಲಾಭದಾಯಕವೆಂದು ಕಾಯಫನು ಉದ್ದೇಶಿ ಸಿದ್ದನು. ಕಾಯಫನು ಮಹಾಯಾಜಕ ವೃತ್ತಿಯಲ್ಲಿ ಇದ್ದದ್ದರಿಂದ, ಅವನು ವಿಭಿನ್ನವಾದ ಹೇಳಿಕೆ ನೀಡಿ ದನು ಎಂದು ಯೋಹಾನನು ಗಮನಿಸಿದ್ದನು. "ಆದರೆ ಕಾಯಫನು ಪರೋಕ್ಷವಾಗಿ, ಯೇಸು ಸಾಯುವದು ಅನ್ಯರಿಗೂ ಹಾಗೂ ಇಸ್ರಾಯೇಲ್ಯರಿಗೂ ಹಿತವೆಂದು ಸೂಚಿಸಿದ್ದನು ..."[26]

ಆ ದಿನದಿಂದ ಆತನನ್ನು ಕೊಲ್ಲುವದಕ್ಕೆ ಆಲೋಚಿಸುತ್ತಿದ್ದರು (ವಚನ 53; ಇದನ್ನು ನೋಡಿ 11:57). ಹಲವಾರು ಸಮಯದಿಂದ ಜನರು ಯೇಸುವನ್ನು ಕೊಲ್ಲಲು ಯತ್ನಿಸುತ್ತಿದ್ದರು (ನೋಡಿ ಯೋಹಾನ 5:18; 7:1), ಆದರೆ ಈ ಸಂದರ್ಭ ವಿಭಿನ್ನವಾಗಿತ್ತು. ಅವರು ಯೇಸುವನ್ನು ಕೊಲ್ಲಲು ಮಾಡಿದ ಹಿಂದಿನ ಪ್ರಯತ್ನಗಳು ಗಂಭೀರವಾಗಿರಲಿಲ್ಲ, ಆದರೆ ಅವನನ್ನು ಕೊಲ್ಲುವವರೆಗೆ ಆತನ ವೈರಿಗಳು ವಿಶ್ರಮಿಸಲಿಲ್ಲ, ಹಿಂದಿನ ಅಕ್ರಮಣಗಳು ತಾತ್ಕಾಲಿಕ ಹಾಗೂ ಮಾನ್ಯತೆ ಹೊಂದಿರಲಿಲ್ಲ; ಆದರೆ ಈ ಮುಂದಿನ ಸ್ಥಿತಿಯನ್ನು ಹಿರೀ ಸಭೆಯವರು ಅತಿ ಪರಿಗಣನೆ ಮಾಡಿದ್ದರು.

ಅತಿ ಪ್ರಮುಖವಾದ ವ್ಯತ್ಯಾಸವು ರಹಸ್ಯವಾಗಿತ್ತು. ಈ ಹಿಂದೆ ಫರಿಸಾಯರು ಕ್ರಿಸ್ತನನ್ನು ಕೊಲ್ಲುವ ಮುಂದಾಳತ್ವ ಹೊಂದಿದ್ದರು (ಮಾರ್ಕ 3:6). ಆದರೆ ಈಗ ಸದ್ದುಕಾಯರು ಹಿರಿಸಭೆಯ ಅಧಿಕಾರ ಹೊಂದಿದ್ದರು.[27] ಸದ್ದುಕಾಯರು ಪುನರುತ್ಥಾನವನ್ನು ನಂಬಿರಲಿಲ್ಲ (ಮತ್ತಾಯ 22:23). ಆದ್ದರಿಂದ ಲಾಜರನ ಪುನರುತ್ಥಾನದ ವಿಚಾರದಲ್ಲಿ ಅವರು ಗೊಂದಲಕ್ಕೊಳಗಾಗಿದ್ದರು. ಈಗಿನಿಂದ ಸದ್ದುಕಾಯರು ಯೇಸುವನ್ನು ಕೊಲ್ಲಲು

ಹವಣಿಸಿದರು. ಫರಿಸಾಯರು ಹೊಂದಲಾರದಂಥ ರಾಜಕೀಯ ಸಂಬಂಧವನ್ನು ಸದ್ದುಕಾಯರು ಹೊಂದಿದ್ದರು.

ಇನ್ನೊಂದು ಸಾರಿ ಯೇಸು ಯೆರೂಸಲೇಮಿನ ಜನ ಜಂಗುಳಿಯಿಂದ ದೂರ ಸರಿದನು. ಆತನು ಮತ್ತು ಶಿಷ್ಯರು ಯೂದಾಯದ ಅರಣ್ಯದ ಸಮೀಪವಿದ್ದ ಎಫ್ರಾಯಿಮಿಗೆ ಹೋದರು (ವಚನ 54). ಚಿಕ್ಕ ಪಟ್ಟಣವು ಯೋರ್ದಾನ[28] ಕಣಿವೆಯ, ಯೂದಾಯದ ಬಳಿಯಿತ್ತು ಎಂದು ಬರಹಗಾರರು ತಿಳಿಸಿದ್ದಾರೆ.

## ಆಶೀರ್ವಾದಗಳ ಕಡೆಗೆ ನಿಮ್ಮ ಮನೋಭಾವವನ್ನು ಬದಲಿಸಿರಿ (ಲೂಕ 17:11-19; ಯೋಹಾನ 11:55)

ಎಫ್ರಾಯಿಮಿನಲ್ಲಿ ಯೇಸು ಎಷು ದಿವಸವಿದ್ದನು ಎಂಬ ಮಾಹಿತಿ ಇಲ್ಲ. ಆದರೆ ಆತನು ತನ್ನ ಶಿಷ್ಯರೊಂದಿಗೆ ಉತ್ತರ ದಿಕ್ಕಿಗೆ ಪ್ರಯಾಣಿಸಿದ್ದರು. ಲೂಕನ ಪ್ರಕಾರ: ಯೆರೂಸಲೇಮಿಗೆ ಪ್ರಯಾಣಮಾಡುವಾಗ ಸಮಾರ್ಯ, ಗಲಿಲಾಯ ಸೀಮೆಯ ನಡುವೆ ಹಾದು ಹೋದನು (ಲೂಕ 17:11ಬಿ). ಸಮಾರ್ಯ ಹಾಗೂ ಗಲಿಲಾಯದಲ್ಲಿದ್ದ ಶಿಷ್ಯರನ್ನು ಆತನು ಪುನಃ ಸಂಧಿಸಿರಬಹುದು.

### ಯೇಸುವಿನ ಯೆರೂಸಲೇಮಿನ ಪ್ರಯಾಣದ ಆರಂಭ (ಲೂಕ 17:11ಎ; ಯೋಹಾನ 11:55)

"ಆಗ ಯೆಹೂದ್ಯರ ಪಸ್ಕಹಬ್ಬ ಹತ್ತಿರವಾಗಿರಲಾಗಿ ಬಹು ಜನರು ... ಯೆರೂಸಲೇಮಿಗೆ ಬಂದರು" (ಯೋಹಾನ 11:55). ಯೇಸು ಮತ್ತು 12 ಜನ ಶಿಷ್ಯರು,[30] ದಕ್ಷಿಣಕ್ಕೆ ಯೋರ್ದಾನ್ ತೀರಕ್ಕೆ ಪ್ರಯಾಣಿಸುತ್ತಿದ್ದ ಕುದುರೆ ಗಾಡಿಗಳನ್ನು ಹತ್ತಿರಬಹುದು. ಪ್ರಯಾಣದ ಸಮಯದಲ್ಲಿ ಅನೇಕರು ಆತನನ್ನು ಸುತ್ತಿಕೊಂಡಿರಬಹುದು. ಈ ಹಬ್ಬದ ಸಂದರ್ಭದಲ್ಲಿ ತನ್ನ ಸಹೋದರರು ಸಲಹೆಯಂತೆ (ಯೋಹಾನ 7:1-6), "ರಾಜನಂತೆ ಆತನು ಪ್ರವಾಸ ಮಾಡಿರಬಹದು."[31] ಯೇಸುವಿನ ಮುಂದಿನ ಯೆರೂಸಲೇಮಿನ ಅಂತಿಮ ಪ್ರಯಾಣದಲ್ಲಿ ಬೋಧಿಸಿದ ಬೋಧನೆಗಳನ್ನು ಹಾಗೂ ಆತನು ಮಾಡಿದ ಕ್ರಿಯೆಗಳನ್ನು ಮುಂದಿನ ಎರಡು ಪಾಠಗಳಲ್ಲಿ ತಿಳಿಸಲಾಗುವದು (ಲೂಕ 17:11ಎ).

### ಯೇಸುವಿನ ಯೆರೂಸಲೇಮಿನ ಪ್ರಯಾಣದ ನಡುವೆ ಉಂಟಾದ ಅಡಚಣೆ (ಲೂಕ 17:11-19)

ಪ್ರಯಾಣದ ಪ್ರಥಮ ದಾಖಲೆಯು ಗಲಿಲಾಯ ಹಾಗೂ ಸಮಾರ್ಯದ ಆಚೆ ಪೆರಿಯದ ದಕ್ಷಿಣದ ಪ್ರಾಂತದಲ್ಲಿ ಉಂಟಾಯಿತು (ವಚನ 11).[32] ಒಂದು ನಿಖರವಾದ ಹಳ್ಳಿಯಲ್ಲಿ ಯೇಸು ಹತ್ತು ಜನ ಕುಷ್ಟರೋಗಿಗಳನ್ನು ಸಂಧಿಸಿದ್ದನು (ವಚನಗಳು 12, 13). ಅದರಲ್ಲಿ ಒಬ್ಬನು ಸಮಾರ್ಯದವನಾದರೆ (ವಚನ 16). ಉಳಿದವರು ಪ್ರಾಯಶ ಯೆಹೂದ್ಯರಾಗಿರಬಹುದು. ಈ ಕ್ರಿಯೆಯು ಜಾತೀಯತೆಯನ್ನು ಮುರಿದುಹಾಕಿತು (ಯೋಹಾನ 4:9).

ಯೇಸು ಹತ್ತು ಜನ ಕುಷ್ಟ ರೋಗಿಗಳನ್ನು ಗುಣಪಡಿಸಿದ ನಂತರ (ವಚನ 14), ಸಮಾರ್ಯದವನೊಬ್ಬನು ಮಾತ್ರ ಹಿಂದಿರುಗಿ ಕೃತಜ್ಞತೆ ಹೇಳಿದನು (ವಚನಗಳ 15, 16). ದೇವರಿಗೆ ಮಹಿಮೆ ಸಲ್ಲಿಸದವರನ್ನು ದೇವರು ಗಮನಿಸುವನು ಎಂಬ ಸೂಚನೆ ಇಲ್ಲಿರುತ್ತದೆ: "ಹತ್ತು ಮಂದಿ ಶುದ್ಧರಾದರವಲ್ಲವೇ, ಮಿಕ್ಕ ಒಂಬತ್ತು ಮಂದಿ ಎಲ್ಲಿ?" (ವಚನ 17). ನಾವು ಕೃತಜ್ಞತೆಯ ಹೃದಯವಳ್ಳವರಾಗಿರಬೇಕು ಎಂದು (ಕೊಲೊಸ್ಸೆ 4:2) ಪೌಲನು ಸಹ ಹೇಳಿರುವನು. "ಕೃತಜ್ಞತೆ ಮನೋಭಾವ ಇರಬೇಕೆಂದು ಇತರರು ಹೇಳಿರುವರು."

## ದೇವರ ವಾಗ್ದಾನಗಳಿಗನುಗುಣವಾದ ಮನೋಭಾವವಿರಲಿ (ಲೂಕ 17:20-37)

**ದೇವರು ಮಾಡಿರುವ ವಾಗ್ದಾನಗಳನ್ನು ನಂಬಿರಿ (ವಚನಗಳು 20, 21)**

ಯೇಸು ಪ್ರಯಾಣ ಮಾಡಿದ ಸ್ಥಳಗಳಲ್ಲಿ ಆತನ ಟೀಕಕಾರದ ಫರಿಸಾಯರು ಹಾಜರಿರುತ್ತಿದ್ದರು. ಅವರು ಆತನಿಗೆ ದೇವರ ರಾಜ್ಯವು ಯಾವಾಗ ಬರುವದೆಂದು ಕೇಳಿದರು (ವಚನ 20ಎ), ಆತನ ಹೇಳಿಕೆಗಳನ್ನು ಸುಳ್ಳು ಮಾಡುವ ಕಾರಣವು ಈ ಪ್ರಶ್ನೆಯಲ್ಲಿತ್ತು (ಲೂಕ 11:54).[33] ಇಂಥಹ ಮಾತುಗಳಿಂದ ಅವರು ಯೇಸುವನ್ನು ಪರೋಕ್ಷವಾಗಿ ಚುಚ್ಚುತ್ತಿದ್ದರು: "ನೀನು ಸೇವೆ ಆರಂಭಿಸಿದಾಗ, ದೇವರ ರಾಜ್ಯವು ಸಮೀಪವಾಯಿತು ಎಂದು ಪ್ರಸಂಗಿಸಿದ್ದೀ" (ಮತ್ತಾಯ 3:2). ಆದರೆ ಮೂರು ವರುಷಗಳು ಕಳೆದರೂ, ಈ ಮಾತು ನೆರವೇರಿರುವದಿಲ್ಲ ಅದು ಯಾವಾಗ ಪ್ರತ್ಯಕ್ಷವಾಗುತ್ತದೆ? ತಮ್ಮ ಪರಿಸ್ಥಿತಿಗನುಗುಣವಾದ ಸಮಯದಲ್ಲಿ ಆ ರಾಜ್ಯವು ಬರುವದೆಂದು ನಂಬಿದ ಇತರೆ ಯೆಹೂದಿಗಳಂತೆ ಇವರೂ ಸಹ ತಿಳಿದಿದ್ದರು.

ಕ್ರಿಸ್ತನು ತಾಳ್ಮೆಯಿಂದ, ತನ್ನ ಆತ್ಮೀಕ ರಾಜ್ಯದ ಬಗ್ಗೆ ತಿಳಿ ಹೇಳಿದನು. "ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದ್ದಲ್ಲ" (ಲೂಕ 17:20ಬಿ). ಅಂತರ್ಯದ ಬದಲಾವಣೆಯ ಬದಲು ದೈಹೀಕವಾದ ಗುರುತುಗಳನ್ನು ಯೆಹೂದ್ಯರು ಬಯಸಿದರು. ಯೇಸುವಿನ ಆ ಮಾತುಗಳು ಇನ್ನೂ ಪರಿಣಾಮಕಾರಿಯಾಗಿವೆ. "ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದ್ದಲ್ಲ ಎಂದು ಹೇಳಿದ ತಕ್ಷಣ, ಆತನು ಬರುವ ಮುನ್ನ ಉಂಟಾಗುವ ಪ್ರವಾದನೆ ಹಾಗೂ ಮುನ್ಸೂಚನೆಯ ಬಗ್ಗೆ ಹೇಳಿದನು ..."[34]

ನಂತರ ಕರ್ತನು, "ದೇವರ ರಾಜ್ಯವು ನಿಮ್ಮಲ್ಲಿಯೇ ಅದೇ ಅಂತ ತಿಳುಕೊಳ್ಳಿರಿ ಅಂದನು" (ವಚನ 21ಬಿ). "ನಿನ್ನಲ್ಲಿಯೇ" ಎಂಬುದು ಗ್ರೀಕ್ ಅನುವಾದವಾಗಿದೆ. (ನೋಡಿ KJV) ಅಂದರೆ ದೇವರ ರಾಜ್ಯವು ಅಂತರಿಕವಾದದ್ದು ಎಂಬ ಸೂಚನೆ ಅದು ಬಾಹಿರವಾದದ್ದಲ್ಲಾ, "ನಿಮ್ಮಲ್ಲಿ" ಅಂದರೆ ಫರಿಸಾಯರಲ್ಲಿ ಎಂಬ ಅರ್ಥ. ಹೌದು ದೇವರ ರಾಜ್ಯ/ಅಥವಾ ಸಭೆಯು ಹಲವಾರು ದಿವಸಗಳ ನಂತರ ಸ್ಥಾಪನೆಯಾಗದಲಿದ್ದು,[35] ಅದರ ಅರಸನು ಈಗಾಗಲೇ ಅವರ ನಡುವೆಯೇ ಇದ್ದನು.

**ದೇವರು ಹೇಳಿರುವ ವಾಗ್ದಾನಗಳಂತೆ ಸಿದ್ಧರಾಗಿರಿ (ವಚನಗಳು 22, 37)**

ಯೇಸು ಈ ವೈರಿಗಳನ್ನು ಬದಿಗಿಟ್ಟು ಶಿಷ್ಯರೊಂದಿಗೆ ತನ್ನ ಬರೋಣದ ಕುರಿತು ಮಾತಾಡಿದನು. ಅವಿಶ್ವಾಸಿಗಳಿಗೆ ಉಂಟಾಗುವ ಶಿಕ್ಷೆಯ ಕುರಿತು ಫರಿಸಾಯರು ಯೋಚಿಸಿರಬಹುದು. ಫರಿಸಾಯರು ನೀಡಿದ ತೊಂದರೆಗಳಾದ ತನ್ನ ಶಿಷ್ಯರಿಗೆ ಉಂಟಾಗಬಹುದಾದ ಹಿಂಸೆಯ ಕುರಿತು ಕರ್ತನು ಯೋಚಿಸಿದನು. ಇದು ಸಂಭವಿಸುತ್ತದೆ ಎಂದು ಸ್ಪಷ್ಟಪಡಿಸಿದನು. ಕಾರಣವೇನೇ ಇದ್ದರೂ, ಯುಗದ ಸಮಾಪ್ತಿಯಲ್ಲಿ ಆತನು ಹಿಂದಿರುಗುವನೆಂಬದನ್ನು ತಿಳಿಸಿದನು. ಇತರೆ ಸಂಗತಿಗಳೊಂದಿಗೆ ಆತನು:

- ಆತನ ಬರೋಣ ಪ್ರತ್ಯಕ್ಷವಾಗುತ್ತದೆ, ಆತನ ಬರೋಣವನ್ನು (ವಚನ 22), ನಿರೀಕ್ಷಿಸುವಾಗ ಆತನು ಗುಪ್ತವಾಗಿ ಬರುವನೆಂಬ ಹೇಳಿಕೆಯನ್ನು ಕೇಳಬಾರದು; ಆತನು ಬರುವಾಗ, ನಾವುಗಳು ಅರಿಯುತ್ತೇವೆ (ವಚನಗಳು 27-30).
- ನೆನಸದ ಗಳಿಗೆಯಲ್ಲಿ ಆತನು ಬರುತ್ತಾನೆ (ವಚನಗಳು 27-30) ಶುದ್ಧರಾಗದವರಿಗೆ ಅದು ಆಶ್ಚರ್ಯ ಉಂಟುಮಾಡುತ್ತದೆ (ವಚನಗಳು 34-36).

ಕ್ರಿಸ್ತನು ಈ ಸಂದರ್ಭದಲ್ಲಿ ಮಾಡಿದ ಬೋಧನೆಗಳನ್ನು, ಮುಂದೆ ಪ್ರಸ್ತಾಪಿಸಿದೆ, ಮತ್ತಾಯ 24ರಲ್ಲಿ,[36] ಆತನ ಬರೋಣ ಹಾಗೂ ಯೆರೂಸಲೇಮಿನ ನಾಶನದ ಕುರಿತು ಪ್ರಸ್ತಾಪಿಸಲಾಗಿದೆ (ನೋಡಿ ಮತ್ತಾಯ 24:1-3). ಮತ್ತಾಯ 24ರಲ್ಲಿ ಈ ಎರಡೂ

ಅಂಶಗಳನ್ನು ಒಟ್ಟು ಮಾಡಲಾಗಿದೆ.[37] ಹಾಗೆಯೇ ಲೂಕ 17:22-37ರಲ್ಲಿ ಯೆರೂಸಲೇಮಿನ ನಾಶನವನ್ನು ಎರಡನೇ ಬರೇಣದಂತೆ ಚಿತ್ರಿಸಲಾಗಿದೆ.[38]

ವಚನ 25ರಲ್ಲಿ ಮುಖ್ಯಾಂಶ ನೋಡುತ್ತೇವೆ: "ಆದರೆ ಮೊದಲು ಆತನು ಬಹು ಕಷ್ಟಗಳನ್ನ ಅನುಭವಿಸಿ ಈಗಿನ ಕಾಲದ ಜನರಿಂದ ನಿರಾಕರಿಸಲ್ಪಡಬೇಕು" ಮುಂದಿನ ಭವಿಷ್ಯತ್ ಉತ್ತಮವಾಗಿದ್ದರೂ, ತಾನು ಸಾಯಲೇಬೇಕು ಎಂದು ತನ್ನ ಶಿಷ್ಯರಿಗೆ ತಿಳಿಸಿದನು.

## ಪ್ರಾರ್ಥನೆ ವಿಚಾರದಲ್ಲಿ ಹೊಂದಾಣಿಕೆಯ ಮನೋಭಾವ (ಲೂಕ 18:1-14)

ಕ್ರಿಸ್ತನಿಗೂ (ಲೂಕ 17:25) ಹಾಗೂ ಆತನ ಅನುಯಾಯಿಗಳಿಗೂ ಸಂಕಷ್ಟದ ದಿನಗಳು ಎದುರಾಗಲಿದ್ದವು (18:7) - ದೇವರಿಗೆ ಸಮೀಪವಾಗಿದ್ದರಿಂದ ಅದನ್ನು ಎದುರಿಸುವ ಶಕ್ತಿಯನ್ನು ಹೊಂದಿದ್ದರು. ಯೇಸು ಈಗ ಪ್ರಾರ್ಥನೆಯ ಪ್ರಸ್ತಾಪವನ್ನು ಮಾಡುತ್ತಿರುವನು.

### ದೇವರಲ್ಲಿ ಭರವಸವುಳ್ಳವರಾಗಿರ್ರಿ (ವಚನಗಳು 1-8)

"ಬೇಸರಗೊಳ್ಳದೆ, ಪ್ರಾರ್ಥಿಸಬೇಕೆಂದು ಒಂದು ಸಾಮ್ಯವನ್ನು ಆತನು ಹೇಳಿದನು" (ವಚನ 1). "ಒಬ್ಬ ನ್ಯಾಯಾಧಿಪತಿ ಇದ್ದನು, ಅವನು ದೇವರಿಗೆ ಹೆದರದೆ ಇದ್ದ ಮನುಷ್ಯನು" (ವಚನ 2). ಎಡಬಿಡದೆ ಪೀಡಿಸುತ್ತಿದ್ದ ವಿಧವೆಗೆ ಆತನು ನ್ಯಾಯತೀರಿಸಿದನು (ವಚನಗಳು 3-5).[39] ಕಠಿಣವಾದ ಒಬ್ಬ ಮನುಷ್ಯನು ಮನಃ ಮರುಗುವವನಾದರೆ, ಕರುಣೆಯುಳ್ಳ ದೇವರು ತನ್ನ ಮಕ್ಕಳ ಪ್ರಾರ್ಥನೆಯನ್ನು ಇನ್ನು ಆಸಕ್ತಿಯಿಂದ ಆಲಿಸುವನಲ್ಲವೇ! ಇಲ್ಲಿ ಕ್ರಿಸ್ತನು ಒಂದು ಮುಖ್ಯ ಅಂಶವನ್ನು ನೀಡಿರುವನು: "ಹೀಗಿದ್ದರೂ ಮನುಷ್ಯ ಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನು ಅಂದನು" (ವಚನಗಳು 7, 8ಎ).[40]

ತನ್ನ ಅನುಯಾಯಿಗಳು ಸಹಿಸಬೇಕಿದ್ದ ವಿಚಾರದಲ್ಲಿ, "ಯೇಸು, ಮನುಷ್ಯ ಕುಮಾರನು ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನೋ?" ಅಂದನು (ವಚನ 8ಬಿ). ಇದರ ಅರ್ಥವೇನೆಂದರೆ, "ಸಂಕಷ್ಟದ ಸಮಯದಲ್ಲೂ ಪ್ರಾರ್ಥನೆಯನ್ನು ಮುಂದುವರೆಸುವಂಥ ನಂಬಿಕೆಯನ್ನು ಕಾಣುವನೇ?"[41]

### ನಿನ್ನಲ್ಲೇ ಭರವಸವಿಡಬೇಡ (ವಚನಗಳು 9-14)

ಸುಮ್ಮನೇ ಪ್ರಾರ್ಥನೆ ಮಾಡುವದಕ್ಕಿಂತ, ಪ್ರಾರ್ಥನೆ ಮಾಡಲು ಉತ್ತಮ ಮನೋಭಾವ ವನ್ನು ಹೊಂದಿರಬೇಕು. ಆದ್ದರಿಂದ ಕ್ರಿಸ್ತನು ಎರಡನೆ ದೃಷ್ಟಾಂತ ಹೇಳಿದನು. "ಇದಲ್ಲದೆ ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸವಿಟ್ಟುಕೊಂಡು ಉಳಿದವರನ್ನು ಉದಾಸೀನ ಮಾಡುವಂಥ ಕೆಲವರಿಗಾಗಿ ಹೇಳಿದನು" (ವಚನ 9). ಅದು ಫರಿಸಾಯರ ಕುರಿತ ವಿವರಣೆ ಸ್ವಾರ್ಥ ನಾಯಕರಿಗಾಗಿ ಆತನು ಹೇಳಿದ ದೃಷ್ಟಾಂತ (ಲೂಕ 12:1).[42]

ತನ್ನ ಸ್ವಂತಿಕೆಯಲ್ಲಿ ಹೆಮ್ಮೆ ಪಟ್ಟಂತ ಫರಿಸಾಯನ ಕುರಿತು ದೃಷ್ಟಾಂತ,[43] (ವಚನಗಳು 11, 12). ಮತ್ತು ಅದಕ್ಕೆ ತದ್ವಿರುದ್ಧವಾಗಿ ಸುಂಕದವನ ದೃಷ್ಟಾಂತವನ್ನು ಹೇಳಿದರು. ಅವನು "ಪಾಪಿಯಾದ ನನ್ನನ್ನು ಕ್ಷಮಿಸು" ಅಂದನು (ವಚನ 13). ಅಂತಿಮವಾಗಿ ಯೇಸು, "ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು"; "ತನ್ನನು ಹೆಚ್ಚಿಸಿಕೊಳ್ಳುವವ ಪ್ರತಿಯೊಬ್ಬನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು ಅಂದನು" (ವಚನ 14)[44] ತಗ್ಗಿದವರಾಗಿ ನಾವು ಪ್ರಾರ್ಥಿಸಬೇಕು.

## ಮುಕ್ತಾಯ

ಮನೋಭಾವವನ್ನು ಪರೀಕ್ಷಿಸುವ ಸಮಯವು ಇದಾಗಿದೆ. ಪೌಲನು ಕೊರಿಂಥದವರಿಗೆ, "ನಿಮ್ಮ ಗುಣವನ್ನು ಪರಿಕ್ಷಿಸಿ ತಿಳುಕೊಳ್ಳಬೇಕೆಂಬುವ ಉದ್ದೇಶದಿಂದಲೇ ಮೊದಲು ಬರೆದನು"

(2 ಕೊರಿಂಥ 2:9ಎ). ಆಂಪ್ಲಿಫೈಡ್ ಅನುವಾದದಲ್ಲಿ "ನಿಮ್ಮ *ಮನೋಭಾವವನ್ನು* ಪರೀಕ್ಷಿಸುವ ಸಲುವಾಗಿ" ಎಂದಿದೆ (ಒತ್ತಿ ಹೇಳಿದ್ದು ನನ್ನದು). ಮನೋಭಾವವನ್ನು ನಾನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂಬ ತರ್ಕ ನಿಮ್ಮದಿರಬಹುದು. ಅದು ಒಂದು ಹೋರಾಟವಾಗಿದೆ. ನೀನು ನಿನ್ನ ಕೆಟ್ಟ ಮನೋಭಾವವನ್ನು ತೋರ್ಪಡಿಸಿರುವ ವಿಚಾರವನ್ನು ನಿಮ್ಮ ಸ್ನೇಹಿತರಿಂದ ಕೇಳಿ ಅರಿಯಬಹುದು. ದೇವರೇ ನನ್ನ ಮನೋಭಾವವನ್ನು ಪರೀಕ್ಷಿಸು ಎಂದು ಆತನನ್ನು ಕೇಳಬಹುದು (ಕೀರ್ತನೆ 26:2; ಯೆರೆಮೀಯ 12:3).

ಪ್ರತಿಯೊಬ್ಬರೂ ತಮ್ಮ ಮನೋಭಾವವನ್ನು ಹೇಗೆ ಪರಿವರ್ತಿಸಿಕೊಳ್ಳಬಹುದು? ಫಿಲಿಪ್ಪಿ 4:8ರಲ್ಲಿ ಇದಕ್ಕೆ ಉತ್ತರವಿದೆ: "ಕಡೇ ಮಾತೇನಂದರೆ, ಸಹೋದರರೇ, ಯಾವವದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ ಮನೋಹರವೂ ಆಗಿದೆಯೋ, ಯಾವದು ಸದ್ಗುಣವಾಗಿದೆಯೋ, ಯಾವದು ಕೀರ್ತಿಗೆ ಯೋಗ್ಯವೋ, ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳಿರಿ." KJVಯಲ್ಲಿ, ಈ ವಿಚಾರವನ್ನು ಯೋಚಿಸು, ಉತ್ತಮ ಹಾಗೂ ಸಕರಾತ್ಮಕವಾದ ವಿಚಾರಗಳಿಂದ ನಮ್ಮ ಮನೋಭಾವವನ್ನು ಬದಲಿಸಿಕೊಳ್ಳಬಹುದು.

ಕರ್ತನ ಮನೋಭಾವವನ್ನೇ ನಮ್ಮಲ್ಲಿ ವೃದ್ಧಿಪಡಿಸಿಕೊಳ್ಳಬೇಕು. ಪೌಲನು ಬರೆದು, "ಕ್ರಿಸ್ತ ಯೇಸುವಿನಲ್ಲಿದ್ದ ಮನಸ್ಸು ನಿಮ್ಮಲಿರಲಿ" (ಫಿಲಿಪ್ಪಿ 2:5). ಇದನ್ನು ಪೂರ್ಣವಾಗಿ ಹೊಂದಲು ಅಸಾಧ್ಯವಾದರೂ, ಆತನ ಸಮೀಪ ಬರುವದಾದರೆ, ಅಧಿಕ ಸಮಾಧಾನವನ್ನು ಹಾಗೂ ಆಶೀರ್ವಾದಗಳನ್ನು ಪಡೆಯುತ್ತೇವೆ.

## ಮಾಹಿತಿ

ಈ ಪಾಠದಿಂದ, ಸಾಧ್ಯವಾದಷ್ಟು ಪ್ರಸಂಗಗಳನ್ನು ಮಾಡಬಹುದು. ದೇವರ ಕೃಪೆಯ ಅಗತ್ಯವಾಗಿ ಲೂಕ 17:7-10ರ ಭಾಗವನ್ನು (ನಾವು ಅಪ್ರಯೋಜಕರೇ) ಲಾಜರನ ವಿವರವಾದ ಪ್ರಸಂಗವನ್ನು ತಿಳಿಸಿರಿ (ಯೋಹಾನ 11:1-46), ಬಿಡದೆ ಬೇಡಿದ ವಿಧವೆ ಸಾಮ್ಯ (ಲೂಕ 18:1-8) ದಿಂದ, ಪ್ರಾರ್ಥನೆಯ ಬಗ್ಗೆ ಬೋಧಿಸಿ. ಫರಿಸಾಯ ಹಾಗೂ ಸುಂಕದವನು (ಲೂಕ 18:9-14) ಸಾಮ್ಯದಿಂದ, ಮಾನವೀಯತೆಯ ಬಗ್ಗೆ ಬೋಧಿಸಿ ("ದೇವರ ಕರುಣೆ" ಮುಂದಿನ ಪಾಠ ನೋಡಿರಿ!). "ಇದರ ಸಂಗಡ ದೇವರೇ ನಮ್ಮ ನಂಬಿಕೆಯನ್ನು ವೃದ್ಧಿಸು" (ಲೂಕ 17:5); "ಯೇಸು ಅವರನ್ನು ಪ್ರೀತಿಸಿದನು" (ಯೋಹಾನ 11:5; ನಮಗೆಲ್ಲರಿಗೂ ಸ್ನೇಹಿತರ ಅಗತ್ಯವಿದೆ); "ನಾನೇ ಜೀವವೂ, ಪುನರುತ್ಥಾನವೂ ಆಗಿರುವೆನು" (ಯೋಹಾನ 11:25); "ಲೋಟನ ಹೆಂಡತಿಯನ್ನು ನೆನಪು ಮಾಡಿರಿ" (ಲೂಕ 17:32).

---

ಟಿಪ್ಪಣೆಗಳು

[1]ಮನೋಭಾವದ ಹೊಂದಾಣಿಕೆಯನ್ನು "ಕಂಟ್ರಿ ಹಾಗೂ ಪಾಶ್ಚಿಮಾತ್ಯ" ಸಂಗೀತಕ್ಕೆ ಹೋಲಿಸಿರಿ. [2]ಲೂಕ 17:1; ಮತ್ತಾಯ 18:7, 10 ಮತ್ತು ಲೂಕ 17:2ನ್ನು ಮತ್ತಾಯ 18:6 ಹೋಲಿಸಿ. [3]"ಚಿಕ್ಕವರು" ಕುರಿತ ಚರ್ಚೆಗೆ "ಶಿಷ್ಯತ್ವದ ಗುರುತುಗಳು" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 4ನೇ* ಪುಸ್ತಕದಲ್ಲಿ ನೋಡಿರಿ. [4]ಅಧಿಕವಾದ ವಿರಣೆಯನ್ನು ನೀಡಬಹುದು. [5]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 517. [6]ಮತ್ತಾಯ 18:21-35ನ್ನು ಹೋಲಿಸಿ, ಮತ್ತಾಯ 18:21-35; ಲೂಕ 17:3, 4 ಪ್ರಕಾರ ಮಾನಸಾಂತರದ ನಂತರ ಕ್ಷಮಿಸಬಹುದು. [7]"ನಮ್ಮ ನಂಬಿಕೆಯನ್ನು ವೃದ್ಧಿಸು" ಎಂದು ನಾವೆಲ್ಲರೂ ಮನವಿ ಮಾಡಬಹುದು. [8]ಹಿಪ್ಪನೇರಳೆ ಮರವು ಆಳವಾಗಿ ಬೇರೂರಿರುತ್ತದೆ, ಅದನ್ನು ಎಳೆಯಲು ಬಹು ಪ್ರಯಾಸ ಲೂಕ 17:6ನ್ನು ಮತ್ತಾಯ 17:20 ರೊಂದಿಗೆ "ನನ್ನ ಅಪನಂಬಿಕೆಯಲ್ಲಿ ಸಹಾಯಿಸು" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 4ನೇ* ಪುಸ್ತಕದಲ್ಲಿ ನೋಡಿ. [9]ಮರಿಯಳು ಹಾಗೂ ಮಾರ್ಥಳ ಬಗ್ಗೆ ಲೂಕ 10:38-42; ಯೋಹಾನ

11:2 (ನೋಡಿ ಯೋಹಾನ 12:3). [10]ನಾಲ್ಕು ಪೂರ್ಣ ದಿನಗಳೆಂದು ಅರಿಯೆವು (ವಚನ 17) (ವಚನ 6) ಎರಡು ಪೂರ್ಣ ದಿವಸವೆಂದು ಅರಿಯೆವು. ಸಂದೇಶಕನು ಬರುವದರೊಳಗಾಗಿ ಲಾಜರನು ಮರಣ ಹೊಂದಿರಬಹುದು.

[11]Edmund P. Clowney, Jr., *The Life of Christ* (Grove City, Pa.: Visuals, 1953), 31. ಇದು ಯೋಹಾನನ ಏಳನೇಯ "ಸೂಚಕ ಕ್ರಿಯೆ." [12]ಪೂರ್ಣ ವಿವರಣೆ ನೀಡಲು ಸ್ಥಳಾವಕಾಶವಿಲ್ಲ. [13]ದಿ ದಿಮಸ್ ಅಂದರೆ "ಅವಳಿ ಜವಳಿ" [14]ಜೀವದಿಂದ ಎಳುವನು. [15]ಅವನು ಆತ್ಮೀಕವಾಗಿ ಸಾಯದೇ ನಿತ್ಯಜೀವವನ್ನು ಆನಂದಿಸುವನು. [16]ಯೋಹಾನ 6:35; 8:12, 58; 10:11; 11:25; 14:6; 15:1; "ನಾನು" ಎಂದು ಏಳುಸಾರಿ ಬರೆದದೆ. [17]ಯೇಸುವಿನ ಕೋಪವನ್ನು ನಕಾರಾತ್ಮಕವಾಗಿರುವದನ್ನು ಸುವಾರ್ತೆಗಳಲ್ಲಿ "ತತ್ತರಿಸು" ಮತ್ತು "ನೊಂದು" ಎಂದು ಉಪಯೋಗಿಸಿದ ಗ್ರೀಕ್ ಪದಗಳು ಆಗಾಗ್ಗೆ ಉಪಯೋಗಿಸಲಾಗಿದೆ. ಆಚಾರಪೂರ್ವಕವಾಗಿರುವ ಹೆಚ್ಚಾದ ದುಖವನ್ನು ಆತನಿಗೆ ಹಿಡಿಸಲಿಲ್ಲ ಎಂಬುದನ್ನು ಇದು ಸೂಚಿಸುತ್ತದೆ (ಮಾರ್ಕ 5:39 ಮೇಲಿನ ವ್ಯಾಖ್ಯಾನಗಳಿಗೆ "ನೀನು ನಂಬುತ್ತೀಯಾ?" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 3ನೇ* ಪುಸ್ತಕವನ್ನು ನೋಡಿ.) ಲೋಕಗಳಿಗೆ ಪಾಪವು ಪ್ರವೇಶಿಸಿರುವದರಿಂದ ಆತನು ನೊಂದಿರಬಹುದು, ಅದು ಮರಣವನ್ನು ಮತ್ತು ಹೃದಯಕ್ಕೆ ನೋವನ್ನು ಉಂಟುಮಾಡುವುದು - ಆತನು ನೋಡುತ್ತಿರುವ ಹೃದಯದ ನೋವನ್ನು (ನೋಡಿ ಆದಿಕಾಂಡ 3:3; ರೋಮಾಪುರ 5:12). ಆತನ ಸ್ನೇಹಿತರು ಗೊಂದಲಗೊಳಗಾದ್ದರಿಂದ ಆತನಿಗೆ ಕೂಡ ಗೊಂದಲ ಉಂಟಾಗಿರಬಹುದೆಂದು ಆ ಮಾತುಗಳು ಸಾಧಾರಣವಾಗಿ ಸೂಚಿಸುತ್ತವೆ. [18]ಯೋಹಾನ 11:35 ಸತ್ಯವೇದದ ಅತಿ ಚಿಕ್ಕ ವಚನ, ಮಕ್ಕಳು ಬಾಯಿಪಾಠ ಮಾಡುವ ಮೊದಲ ವಚನ. [19]ಸತ್ತ ನೀತಿವಂತರ ನಡುವಿನಿಂದ ಲಾಜರನು ಬಂದದ್ದು ದುಃಖಕರವೇ (ಲೂಕ 16:23). ಅವನ ದುಃಖದ ಸ್ಥಳಕ್ಕೆ ಹಿಂದಿರುಗಿದ್ದನು, ಅವನು ಪುನಃ ಸತ್ತನು. [20]ಆ ದಿವಸಗಳ ಸಮಾದಿಗಳ ವಿವರಣೆ.

[21]McGarvey and Pendleton, 526. [22]ಯೋಹಾನ 11ರಲ್ಲಿ ಯೆಹೂದ್ಯರ ನಾಯಕರ ಕುರಿತಾಗಿದ್ದರೆ (ವಚನ 8), ಅಂತ್ಯ (ವಚನ 55) ಅಧ್ಯಾಯದ ನಡುವಿನಲ್ಲಿದೆ ವಚನ 46 ಯೆಹೂದ್ಯರ ಗುಂಪು (ವಚನ 45) ಪರಿಸಾಯರು. [23]ವಚನ 47ರಲ್ಲಿ "ಹಿರೀ ಸಭೆ" ಕುರಿತ ಚರ್ಚೆಗೆ "ಕ್ರಿಸ್ತನು ಆಗಮಿಸಿದ ಲೋಕ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 1ನೇ* ಪುಸ್ತಕದಲ್ಲಿ ನೋಡಿ. [24]ಯೇಸು ಮಾಡಿದ ಮಹತ್ಕಾರ್ಯವನ್ನು ತೆಗಳಲಿಲ್ಲ (ವಚನ 47). ಪುನರುತ್ಥಾನದ ಸಹ. [25]ಕಾಯಫನು ಆ ವರ್ಷದ "ಯಾಜಕನು" ಅಂದರೆ ಆ ವರ್ಷ ಮಾತ್ರವಲ್ಲ" ಎಂಬ ಅರ್ಥ. ರೋಮಾಯರು ಅನನೀಯ ನನ್ನು ತೆಗೆದು ಹಾಕಿದ ನಂತರ, ಕಾಯಫನು ಮಹಾಯಾಜಕನಾದನು. [26]Robert L. Thomas, ed., and Stanley N. Gundry, assoc. ed., *A Harmony of the Gospels* (Chicago: Moody Press, 1978), 161. [27]ಯೋಹಾನ 11:47, 57ರಲ್ಲಿ "ಮುಖ್ಯ ಯಾಜಕರು" ಎಂಬುದು ಸದ್ದು ಕಾಯರು. [28]"ಯೇಸುವಿನ ಸೇವಾಕಾಲವಾದ" ಪಾಲೆಸ್ತೇನ್ ನಕಾಶೆ ನೋಡಿರಿ. [29]ಸಮಾರ್ಯ ಹಾಗೂ ಗಲಿಲಾಯದ ನಡುವೆ ಹಾದು ಹೋದನು ಪಂಡಿತರಲ್ಲಿ ಈ ವಿಚಾರ ಗೊಂದಲವಾಗಿದೆ. [30]ಗಲಿಲಾಯದಲ್ಲಿ ಸೇವೆ ಮಾಡಿದ ಸ್ತ್ರೀಯರು ಆತನೊಂದಿಗೆ ಪ್ರಯಾಣಿಸಿದ್ದರು (ನೋಡಿ ಮತ್ತಾಯ 27:55; ಮಾರ್ಕ 15:41).

[31]Robert Duncan Culver, *The Life of Christ* (Grand Rapids, Mich.: Baker Book House, 1976), 196. [32]ಈ ಪುಸ್ತಕದಲ್ಲಿರುವ "ಯೇಸುವಿನ ಸೇವೆಯ ಕಾಲದಲ್ಲಿದ್ದ ಪಾಲೇಸ್ತೀನ" ದಲ್ಲಿ ಈ ಸಮಾನ್ಯ ಪ್ರದೇಶ ನೋಡಿ. [33]ಪ್ರಯಾಣ ಮುಂದುವರೆದಾಗ ಅವರು ನಿರೀಕ್ಷಣೆ ಬಿರುಗಾಳಿಯಲ್ಲಿ ಸಿಲುಕಿಕೊಂಡರು, ಬಹುಶಃ ಅವರ ಪ್ರಶ್ನೆ ಯಥಾರ್ಥತೆಯುಳ್ಳದ್ದಾಗಿರಬಹುದು - ಆದರೆ ಅದು ಹಾಗಿರಲಾಲಿಲ್ಲ. [34]John Franklin Carter, *A Layman's Harmony of the Gospels* (Nashville: Broadman Press, 1961), 227. [35]ಕ್ರಿಸ್ತನ ಮರಣ ಪುನರುತ್ಥಾನದ ನಂತರ ಪಂಚಾಶತ್ತಮ ದಿನದಂದು ಸಭೆ ಸ್ಥಾಪನೆಯಾಯಿತು (ಅಪೊಸ್ತಲರ ಕೃತ್ಯಗಳು 2). [36]ಲೂಕ 17:24/ಮತ್ತಾಯ 24:27; ಲೂಕ 17:26, 27/ಮತ್ತಾಯ 24:37-39; ಲೂಕ 17:31/ಮತ್ತಾಯ 24:17; ಲೂಕ 17:35/ಮತ್ತಾಯ 24:41; ಲೂಕ 17:37/ಮತ್ತಾಯ 24:28 ಇವುಗಳನ್ನು ಹೋಲಿಸಿ ನೋಡಿ. ಲೂಕ 17ರ ಕೆಲವು ಸಂಗತಿಗಳು ಮತ್ತಾಯ 24ರಲ್ಲಿ ಇರುವದಿಲ್ಲ. ಉದಾಹರಣೆ ಲೂಕ 17ರಲ್ಲಿ ಸೋದೋಮಿನ ನಾಶನದ ವಿಚಾರವಿದ್ದರೆ ಲೋಟನ ಹೆಂಡತಿಯನ್ನು ನೆನಪು ಮಾಡಿರಿ. (ಲೂಕ 17:32). ನೋಡಿ ಲೂಕ 9:62 … . [37]ಮತ್ತಾಯ 24ರ ಮುಂದಿನ ಚರ್ಚೆಯನ್ನು ನೋಡಿರಿ. [38]ಲೂಕ 31, 37 ಗಮನವಿಟ್ಟಿ ದ್ದೇನೆ. ಯೇಸುವಿನ ಎರಡನೇ ಬರೋಣದ ವಿಚಾರವಿದೆ. ಮತ್ತಾಯ 24ರಲ್ಲಿ "ಯೆರೂಸಲೇಮಿನ ನಾಶನದ" ವಿಚಾರವಿದೆ. [39]"ಹಿಂಜರಿಯದ ವಿಧವೆ" ಕಠಿಣವಾದ ಒತ್ತಾಯ. [40]ಲೂಕ 18:7 ಮತ್ತು ಪ್ರಕಟಣೆ 6:9-11ನ್ನು ಹೋಲಿಸಿ.

[41]ಅವಿಂಗ್ ಬೈಬಲ್‌ನಲ್ಲಿ “ಪ್ರಾರ್ಥನೆ ಹಾಗೂ ನಂಬಿಕೆ” ಇರುವವರು ಎಂದಿದೆ. ಮತ್ತಾಯ 24:12, 13. [42]ಫರಿಸಾಯರ ಹಾಗೂ ಅವರ ಹಿಂಬಾಲಕರ ಮನೋಭಾವವನ್ನು ಬದಲಾಯಿಸುವ ಕಾರ್ಯ. ಫರಿಸಾಯರನ್ನು ಬದಲಿಸಲು, ಪ್ರಾಯಶಃ ಫರಿಸಾಯರ ಸಾಮ್ಯವನ್ನು ಬಳಸಿರಲಾರನು. [43]H. I. Hester, *The Heart of the New Testament* (Liberty, Mo.: Quality Press, 1963), 179. [44]“ದೇವರೇ, ಕನಿಕರ ತೋರು!” ಎಂಬ ಮುಂದಿನ ಪಾಠವನ್ನು ನೋಡಿರಿ.

